**ದಿನಾಂಕಃ 09-11-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎನ್.ಬಿ.ಬಿ. ವಕೀಲರಿಂದಃ**

1997 ರಲ್ಲಿ ಹಾಲವ್ವ ಮಾಡಿದ ಮೃತ್ಯು ಪತ್ರವನ್ನು ಕಂಡೆಪ್ಪ ರದ್ದು ಮಾಡಿಸಿರುವುದು ಹಾಲವ್ವಗೆ ಮೃತಪಟ್ಟಾಗ ತಿಳಿಯಿತು. ಈ ಬಗ್ಗೆ ನಾನು ಕಂಡೆಪ್ಪನ ಮೇಲೆ ಯಾವುದೇ ಕ್ರಿಮಿನಲ್ ಪ್ರಕರಣ ದಾಖಲಿಸಿರುವುದಿಲ್ಲ ಕ್ರಿಮಿನಲ್ ಪ್ರಕರಣದ ದಾಖಲಿಸಲು ನನಗೆ ತೊಂದರೆ ಇರುವುದಿಲ್ಲ. ಯಾವುದೇ ದಾಖಲೆ ನೊಂದಾವಣಿ ಮಾಡುವಾಗ ಪಕ್ಷಗಾರರ ಪೋಟೊ ಸ್ಕ್ಯಾನ್ ಮಾಡುತ್ತಾರೆ ಎಂದರೆ ನಿಜ. ನಿಪಿ-4 ರ 2 ನೇ ಪುಟದಲ್ಲಿರುವುದು ನಮ್ಮ ತಾಯಿಯ ಪೋಟೊ ಇರುತ್ತದೆ. 1997 ರಲ್ಲಿ ನಾನು ನನ್ನ ತಾಯಿಯನ್ನು ಸರಿಯಾಗಿ ನೋಡಿಕೊಳ್ಳದ ಕಾರಣ ಮೃತ್ಯು ಪತ್ರ ರದ್ದು ಮಾಡಿದರು ಎಂದರೆ ಸರಿಯಲ್ಲ. ನಾನು ರದ್ದಾದ ಮೃತ್ಯು ಪತ್ರವನ್ನು ನನ್ನ ತಾಯಿ ತೀರಿಕೊಂಡ ಬಳಿ ನೋಡಿರುತ್ತೇನೆ. ನನ್ನ ತಾಯಿ ತೀರಿಕೊಂಡ ಸುಮಾರು 70-75 ವರ್ಷ ವಯಸ್ಸಾಗಿತ್ತು. ಆಗ ಅವರಿಗೆ ಕಣ್ಣುಗಳು ಸರಿಯಾಗಿ ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 17.04.2017 ರಂದು ಆದಂತಹ ಮೃತ್ಯು ಪತ್ರದಲ್ಲಿ ಕರಿಯಪ್ಪ ಅವರ ಮಗಳು ಹನುಮವ್ವ 01 ಎಕರೆ 19 ಗುಂಟೆ ಸರ್ವೆ ನಂ. 310 ಕದರಮಂಡಲಗಿ ಗ್ರಾಮದ ಆಸ್ತಿ ಬರೆದುಕೊಟ್ಟಿರುತ್ತಾರೆ ಎಂದು ಬರೆದಿರುವುದು ಹಾಲವ್ವ ತೀರಿಕೊಂಡ ನಂತರ ತಿಳಿದುಬಂದಿರುತ್ತದೆ. ಸದರಿ ವಿಲ್ ನಲ್ಲಿ 01 ಎಕರೆ 29 ಗುಂಟೆ ಹಿರಿಯ ಮಗಳಾದ ಹನುಮವ್ವಗೆ ಮಾಡಿಕೊಟ್ಟ ಬಗ್ಗೆ ವಿಲನ್ನು ಹಾಜರು ಪಡಿಸಿರುವುದಿಲ್ಲ. ದಿನಾಂಕಃ 17.04.2017 ರ ಮೃತ್ಯು ಪತ್ರವನ್ನು ನಾನು ಹಾಜರು ಪಡಿಸಿರುತ್ತೇನೆ. ಸದರಿ ವಿಲ್ ನಲ್ಲಿ 01 ಎಕರೆ 29 ಗುಂಟೆ ಹನುಮವ್ವಗೆ ಮಾಡಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ. 310/3 ಕ 03 ಎಕರೆ 09 ಗುಂಟೆ ಆಸ್ತಿಯನ್ನು ಕರಿಯಪ್ಪ ಹಾವನೂರ ಸ್ವತಃ ಖರೀದಿ ಮಾಡಿದ್ದು ಎಂದರೆ ಸಾಕ್ಷಿ 1957 ರಲ್ಲಿ ಗಂಡ-ಹೆಂಡತಿ ಕೂಡಿ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಈ ಬಗ್ಗೆ ಖರೀದಿ ಪತ್ರವನ್ನು ನಾನು ಹಾಜರು ಪಡಿಸಿರುತ್ತೇನೆ ನಾನು

ಯಾವುದೇ ಖರೀದಿ ಪತ್ರ ಹಾಜರು ಪಡಿಸದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕದರಮಂಡಲಗಿ ಗ್ರಾಮದ ಸರ್ವೆ ನಂ. 310/3 ಕ ಆಸ್ತಿಯ 03 ಎಕರೆ 09 ಗುಂಟೆಯನ್ನು ಕರಿಯಪ್ಪ ತನ್ನ ಮಗಳು ಹನುಮವ್ವಗೆ ಮೃತ್ಯು ಪತ್ರ ಮುಖಾಂತರ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಕದರಮಂಡಲಗಿ ಗ್ರಾಮದ ಡ-3157 ಮಂಜೂರಾಗಿ ಚಾಲ್ತಿಯಲ್ಲಿದೆ ಎಂದರೆ ಸರಿಯಲ್ಲ. ಸದರಿ ಡ-3157 ನ್ನು ನಾನು ನೋಡಿರುವುದಿಲ್ಲ. ಅದನ್ನು ನಾನು ಎಲ್ಲಿಯೂ ಪ್ರಶ್ನೇ ಮಾಡಿರುವುದಿಲ್ಲ. ಡ-3157 ಆಸ್ತಿಯ ಪ್ರಕಾರ ಹನುಮವ್ವ ಗೆ ಬಂದಿದ್ದು ಆಕೆ ಮೃತಪಟ್ಟ ನಂತರ ಅವರ ವಾರಸುದಾರರು ಎಂ.ಆರ್.ನಂ. ಹೆಚ್-114/2015-16 ಮಂಜೂರಾದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಈ ಎಂ.ಆರ್ ನ್ನು ನಾನು ಎಲ್ಲಿ ಪ್ರಶ್ನೇ ಮಾಡಿರುವುದಿಲ್ಲ. ಕರಿಯಪ್ಪರು ಮೃತ್ಯು ಪತ್ರ ಮಾಡುವಾಗ ಪಂಚಾಯತಿ ಆಸ್ತಿ 373 ರ ಅರ್ಧ ಭಾಗವನ್ನು ಸಹ ಹನುಮವ್ವಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2017 ಇಸವಿಯಲ್ಲಿ ಹನುಮವ್ವಗೆ ಮೃತ್ಯುಪತ್ರ ಮಾಡಿ ಉಳಿದ ಆಸ್ತಿಯನ್ನು ಹಾಲವ್ವಗೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ್ಯುಪತ್ರದಲ್ಲಿ ಹಾಲವ್ವಗೂ ಸಹ 01 ಎಕರೆ 29 ಗುಂಟೆ ಹನುಮವ್ವನ ಆಸ್ತಿ ಬಿಟ್ಟು ಉಳಿದದ್ದು ಹಾಲವ್ವಗೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಲವ್ವಗೆ ಯಾವುದೇ ಮೃತ್ಯು ಪತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ ಹಾಲವ್ವಗೆ ಮೃತ್ಯು ಪತ್ರ ಮಾಡಿರುವುದನ್ನು ಸದರಿ ಮೃತ್ಯು ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಕದರಮಂಡಲಗಿ ಗ್ರಾಮದ ಸರ್ವೆ ನಂ. 310/3 ಕ 03 ಎಕರೆ 09 ಗುಂಟೆ ಆಸ್ತಿಯಲ್ಲಿ ಪ್ರತಿವಾದಿ ನಂ. 6 ರಿಂದ 10 ನೇದವರ ಹೆಸರು ಇದೆ ಎಂದರೆ ಸರಿಯಲ್ಲ. ಇಮಾಮಸಾಬ ಜಾಲಿಮರದ ಸಾಃ ಮಲ್ಲೂರ, ಬಿ ಸಿ ಕುಸಗೂರ ಸಾಃ ಕದರಮಂಡಲಗಿ ನನಗೆ ಪರಿಚಯ ಇರುವುದಿಲ್ಲ. ಈ ಇಬ್ಬರ ಸಮಕ್ಷಮ ಮೃತ್ಯುಪತ್ರ ರದ್ದಾಗಿರುತ್ತದೆ ಎಂದರೆ ಸರಿಯಲ್ಲ. ಹಿತಾಯಿತವುಲ್ಲಾ ಕಿಲ್ಲೇದಾರ ಮತ್ತು ಬೀರಪ್ಪ ಕಾಡಮ್ಮನವರ ನನ್ನ ಸ್ನೇಹಿತರು ಎಂದರೆ ಸರಿಯಲ್ಲ, ಪರಿಚಯ ಇರುತ್ತಾರೆ. ಈ ಮೊದಲು 2017 ರಲ್ಲಿ ಮೃತ್ಯುಪತ್ರ ಆಗಿದೆ ಎಂದು ನಾನು ತಹಶೀಲ್ದಾರ ಬ್ಯಾಡಗಿಗೆ

ಅರ್ಜಿ ಸಲ್ಲಿಸಿದ್ದೆ ಎಂದರೆ ನಿಜ. ಈ ದಾವೆಯ 6 ನೇ ಪ್ರತಿವಾದಿ ಅದಕ್ಕೆ ತಕರಾರು ಸಲ್ಲಿಸಿದರು ಎಂದರೆ ನಿಜ. ಆಗ ಆರ್.ಟಿ.ಡಿ.ಎಸ್.ಆರ್. 19/2018-19 ನೊಂದಾಯಿತು ಎಂದರೆ ನಿಜ. ಸದರಿ ಪ್ರಕರಣದ ರದ್ದಾಯಿತು ಎಂದರೆ ಸರಿಯಲ್ಲ. ಹನುಮಂತಪ್ಪ 1 ನೇ ಪ್ರತಿವಾದಿ ನನ್ನ ಹೆಸರಿಗೆ ಮೃತ್ಯುಪತ್ರ ಆಗಿದೆ ಎಂದು ಖಾತೆ ಬದಲಾವಣೆಗೆ ತಹಶೀಲ್ದಾರರಿಗೆ ಅರ್ಜಿ ಸಲ್ಲಿಸಿರಬಹುದು ಎಂದರೆ ಇರಬಹುದು. ಆಗ 6 ನೇ ಪ್ರತಿವಾದಿ ತಕರಾರು ಸಲ್ಲಿಸಿದರು ಎಂದರೆ ಇರಬಹುದು. ನಾನು ತಹಶೀಲ್ದಾರರಿಗೆ ಕೊಟ್ಟ ಮೃತ್ಯುಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ತಹಶೀಲ್ದಾರರು ಸಿವಿಲ್ ನ್ಯಾಯಾಲಯಕ್ಕೆ ಮಾಗಣಿ ಮಾಡಲು ಹೇಳಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಮತ್ತು ನನ್ನ ಸಹೋದರ ಹನುಮಂತಪ್ಪ ಆಸ್ತಿ ಎತ್ತಿ ಹಾಕಬೇಕೆಂಬ ಉದ್ದೇಶದಿಂದ 1997 ರಿಂದ ಹಲವಾರು ವಿಲ್ ಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಹಾಲವ್ವರವರು ಮಾಡಿದ ರದ್ದತಿ ಮೃತ್ಯುಪತ್ರದ ನಂತರ ನಮಗೆ ಯಾವುದೇ ಮೃತ್ಯು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದ್ಯಾಮವ್ವ ಹನುಮವ್ವಳ ತಂಗಿ ಇರುತ್ತಾರೆ. ದ್ಯಾಮವ್ವನ ಮಕ್ಕಳು ಹಾಗೂ ಹನುಮವ್ವನ ಮಕ್ಕಳು ನನಗೆ ಶಿಕ್ಷಕರ ವೃತ್ತಿ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ದ್ಯಾಮವ್ವ ಮತ್ತು ಹನುಮವ್ವನ ಮಕ್ಕಳು ನನ್ನಷ್ಟು ವಿದ್ಯಾಭ್ಯಾಸ ಮಾಡಿರುವುದಿಲ್ಲ ಎಂದರೆ ಇರಬಹುದು. ನಾನು ಹೆಚ್ಚು ಓದಿದ್ದರಿಂದ ಅವರ ದುರ್ಲಾಬ ಪಡೆದು ವಿಲ್ ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ವ್ಯಾಜ್ಯ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.